# ಅಮ್ಮನ ದುಡಿಮೆ

■ ಸಿದ್ದನಗೌಡ ಬಿಜ್ಜೂರ ಸರೂರ
ಕಲೆ: ಸಂತೋಷ್ ಸಸಿಹಿತ್ಲು



ಅಮ್ಮ ನೋಡು ಅನುದಿನವೂ
ಅಡುಗೆ ಮಾಡಿ ದಣಿವಳು
ಸುಮ್ಮನಂತೂ ಇರಳು ಆಕೆ
ಸತತ ದುಡಿದೇ ದುಡಿವಳು

ತಾನು ಮಾಡಿದಡಿಗೆ ಮೊದಲು
ಅಮ್ಮನೆಂದೂ ಉಣ್ಣಳು
ಮನೆಯ ಎಲ್ಲರುಂಡ ಮೇಲೆ
ಉಳಿದ ಊಟ ಉಣುವಳು

ನಮ್ಮ ಹೊಟ್ಟೆ ತುಂಬಿಸಲು
ಎಂಥ ಖುಷಿಯೋ ತಾಯಿಗೆ,
ಬೆಳಗು ಸಂಜೆ ರಾತ್ರಿಯೆಲ್ಲ
ಅಡಿಗೆ ಮನೆಯೇ ಅವಳಿಗೆ

ಜಗವನೆಲ್ಲ ಸಲಹೋ ಸೂರ್ಯ
ಯುಗ ಯುಗದಲಿ ಪೂಜ್ಯನು.
ನಮ್ಮನೆಲ್ಲ ಪೊರೆವ ತಾಯಿ
ಮೂಜಗದಲೂ ಪೂಜ್ಯಳು

ದಿನವೂ ದಣಿವ ತ್ಯಾಗಮಯಿಗೆ
ಯಾವ ಕೊಡುಗೆ ಸಮನಿದೆ?
ನಾನು ನೀವು ಎಲ್ಲ ಸೇರಿ
ತುಸು ಪ್ರೀತಿ ಹಂಚಬೇಕಿದೆ ■

## ಕುಂಚ ಪ್ರಪಂಚ

ಇದು ಮಕ್ಕಳ ಭಾವ ವಿಕಾಸಕ್ಕೆ ವೇದಿಕೆ. ಎಳೆಯರು ಬಿಡಿಸಿದ ವರ್ಣಚಿತ್ರ–ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.
**ವಿಳಾಸ:** editorsu@sudha.co.in



**ಅವನಿ ಗಣೇಶ ಭಟ್ಟ**
6ನೇ ತರಗತಿ, ಲಯನ್ಸ್ ಇಂಗ್ಲಿಷ್ ಮೀಡಿಯಂ ಸ್ಕೂಲ್, ಶಿರಸಿ

